**ವ್ಯಾಖ್ಯಾನ**

# ಅನುಕೂಲವಿಲ್ಲದ ಸತಿಯ ವರ್ಜಿಸಬೇಕು

**ಅನುಕೂಲವಿಲ್ಲದ ಸತಿಯ ವರ್ಜಿಸಬೇಕು**

**ವಿನಯದಿ ಗುರುಹಿರಿಯರ ಪೂಜಿಸಬೇಕು**

**ಮನಕೆ ಬಾರದ ಠಾವು ಬಿಟ್ಟು ತೊಲಗಬೇಕು**

**ವನಜನಾಭನ ದಾಸರ ಸಂಗವಿರಬೇಕು**

**ನೆನೆಯುತಲಿರಬೇಕು ಪುರಂದರ ವಿಠಲನ**

**ಬಹೂನಾಮ್ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ.**

ಇದು ಶ್ರೀಕೃಷ್ಣ ಗೀತೆಯಲ್ಲಿ ಹೇಳುವ ಮಾತು.

ಯಾವುದೇ ಜೀವನಿಗೂ ಒಂದೇ ಜನ್ಮದಲ್ಲಿ ಸಾಧನೆ ಮುಗಿಯುವುದಿಲ್ಲ. ಆದ್ದರಿಂದ ಪ್ರತಿ ಜನ್ಮದಲ್ಲೂ ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಸಾಧನೆ ಮಾಡಿಕೊಳ್ಳಲು ಪ್ರಯತ್ನಿಸಬೇಕು. ದೇಹ, ಇಂದ್ರಿಯಗಳು ದೇಹ ಸಂಬಂಧಿಗಳೆಲ್ಲ ದೇವರು ಸಾಧನೆಗೆ ಕೊಟ್ಟ ಸಾಧನಗಳೆಂದು ತಿಳಿಯಬೇಕು.

ಇವುಗಳಲ್ಲಿ ದೇಹ ಇಂದ್ರಿಯಗಳನ್ನು ಅದರಲ್ಲೂ ಮುಖ್ಯವಾಗಿ ಮನಸ್ಸನ್ನು ಸಾಧನೆಯಲ್ಲಿ ತೊಡಗಿಸಬೇಕು.

ದೇಹ ಸಂಬಂಧಿಗಳು, ಆಪ್ತರು ಸಾಧನೆಗೆ, ಜೊತೆಯಾದರೆ ಸರಿ, ಇಲ್ಲದಿದ್ದರೆ ಅವರಿಂದ ದೂರವಿರಬೇಕು. ಇದನ್ನೇ ದಾಸರು ಇನ್ನೊಂದು ಕಡೆ ಹೀಗೆ ಹೇಳುತ್ತಾರೆ.

**"ಅನುಕೂಲವಿಲ್ಲದ ಸತಿಯ ವರ್ಜಿಸಬೇಕು ..... "** ಎಂಬುದರ ಹಿಂದಿರುವ ಅರ್ಥವನ್ನು ತಿಳಿದುಕೊಳ್ಳಬೇಕು. ಸತಿಯನ್ನು ಬಿಟ್ಟುಬಿಡುವುದೆಂದಲ್ಲ. ಇಲ್ಲಿ ಸತಿಯೆಂದರೆ ನಮ್ಮ

ಜೊತೆಯಲ್ಲಿರುವವರು. ಅವರೆಲ್ಲರ ಪ್ರಭಾವ ನಮ್ಮ ಮೇಲಿರುತ್ತವೆ ಎಂಬ ದಾಸರ ಇಂಗಿತ. ನಮ್ಮೆಲ್ಲರ ಸಾಧನೆಗಳಿಗೆ ಸಜ್ಜನ ಸಂಗ ಮುಖ್ಯವೆಂದು. ಆದ್ದರಿಂದಲೇ "ಸತಿ ಅನುಕೂಲವಿರಬೇಕು, ಸತಿ - ಸುತರಲ್ಲಿ ಗುಣಬೇಕು....."

ಇದನ್ನೇ ವಿದುರನು ಧೃತರಾಷ್ಟ್ರನಿಗೆ ಹೇಳುತ್ತಾನೆ.

ನಿನ್ನ ಮಗ ದುರ್ಯೋಧನ ನಿನ್ನ ಸಾಧನೆಗೆ ಅಡ್ಡಿಯಾಗುತ್ತಾನೆ ಅವನನ್ನು ಬಿಟ್ಟು ಬಿಡು.

ಎಂದು.

ಆದರೆ ವಿದುರನ ಮಾತನ್ನು ಲೆಕ್ಕಿಸದೇ ಪುತ್ರಮೋಹದಿಂದ ಮಗನ ಇಚ್ಛೆಯಂತೆ ನಡೆದು ಸಜ್ಜನರಾದ ಪಾಂಡವರಿಗೆ ದ್ರೋಹ ಬಗೆಯುತ್ತಾನೆ.

ಆದರೂ ಭಿಮಸೇನ ದೇವರು, ಧೃತರಾಷ್ಟ್ರ ಮೂಲರೂಪದಲ್ಲಿ ಗಂಧರ್ವ ಹೀಗೆಯೇ ಸಾಧನವಿಲ್ಲದೇ ಸತ್ತರೆ ತನ್ನ ಮೂಲ ರೂಪಕ್ಕೆ ಸೇರುವುದು ಸಾಧ್ಯವಾಗಲಾರದು, ಎಂದು ಅವನಿಗೆ ಇನ್ನಾದರೂ ಸಾಧನೆ ಮಾಡಿಕೊ ಎಂದು ನಿಂದನೆ ಮಾಡುವ ಮೂಲಕ ಎಚ್ಚರಿಸುತ್ತಾರೆ.

ಅದನ್ನೇ ಶ್ರೀ ಪುರಂದರ ದಾಸರು ಈ ಉಗಾಭೋಗದಲ್ಲಿ "**ಅನುಕೂಲವಿಲ್ಲದ ಸತಿಯ ವರ್ಜಿಸಬೇಕು" ಎಂದಿದ್ದಾರೆ**

**ಗುರುಹಿರಿಯರಲ್ಲಿ ಮನ್ನಣೆ ಬೇಕು.**

ಏಕೆಂದರೆ ಗುರು ಹಿರಿಯರ ಆಶೀರ್ವಾದ ಅನುಗ್ರಹ ನಮಗೆ ಶ್ರೇಯಸ್ಸಾಧನವಾಗಿರುತ್ತವೆ.

ಅವರನ್ನು ಅವಜ್ಞೆ ಮಾಡಿದರೆ ಕಷ್ಟ ಅನುಭವಿಸಬೇಕಾಗುದು.

ಉದಾ:--ಇಂದ್ರದೇವರು ಬೃಹಸ್ಪತ್ಯಾಚಾರ್ಯರನ್ನುಅವಜ್ಞೆ ಮಾಡಿದ ಪರಿಣಾಮವಾಗಿ ಸಾಕಷ್ಟು ಕಷ್ಟ ಅನುಭವಿಸಿದರು.

ಇನ್ನು ಪ್ರತಿಯೊಬ್ಬರು ಅಂತರ್ಮುಖಿಗಳಾಗಿ ತಮ್ಮ ಸಾಮರ್ಥ್ಯ,ಯೋಗ್ಯತೆಗಳನ್ನು ಅರಿಯಲು ಪ್ರಯತ್ನಿಸಬೇಕು.ಅಂದಾಗ ಅದಕ್ಕೆ ತಕ್ಕಂತೆ ಸಾಧನೆ ಮಾಡಲು ಸಾಧ್ಯವಾಗುತ್ತದೆ,ಎನ್ನುವುದು ದಾಸರ ಅಭಿಪ್ರಾಯ.

**ಇನ್ನು ಮುಖ್ಯವಾಗಿ ಪದ್ಮನಾಭನ ಭಕ್ತರ ಸಂಗ ಮಾಡಬೇಕು.**

ಸಂಗ ಎಂದರೆ ಕೇವಲ ಅವರೊಂದಿಗೆ ಇರುವುದಷ್ಟೇ ಅಲ್ಲ.ಅವರ ಉಪದೇಶವನ್ನು ಅನುಸಂಧಾನಕ್ಕೆ ತಂದು ಕೊಳ್ಳಬೇಕು.ಮತ್ತು ಎಂದಿಗೂ ಸಜ್ಜನರಲ್ಲಿ ಮಾತ್ಸರ್ಯಪಡದೇ ಅವರಂತೆ ನಾನೂ ಸಾಧಿಸಬೇಕೆನ್ನುವ ಹಂಬಲ ಹೊಂದಬೇಕು.

ಜನರಪವಾದ ನಿಂದೆಗಂಜಿ ಬಾಳಬೇಕು.

ಇದು ಬಹಳ ಮಹತ್ವದ್ದು.

ಶ್ರೀ ಕೃಷ್ಣನು ಜನಾಪವಾದಕ್ಕೆ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತನ್ನ ಮೇಲೆ ಶಮಂತಕ ಮಣಿಯ ಕಳ್ಳತನದ ಆಪಾದನೆ ಬಂದಾಗ ನಡೆದು ತೋರಿಸಿದ್ದಾನೆ.

ಶ್ರೀರಾಮನಾದಾಗ ಜನಾಪರಾಧಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ಸೀತಾ ಮಾತೆಯನ್ನು ಕಾಡಿಗೆ ಕಳಿಸುವ ಮೂಲಕ ತೋರಿಸಿಕೊಡುತ್ತಾನೆ.

ದಾಸರ ಮಾತುಗಳು ನಮ್ಮ ಕತ್ತಲೆಯ ಬಾಳ ಹಾದಿಗೆ ದೀವಟಿಗೆಯಂತಿವೆ ಅವುಗಳನ್ನು ಅನುಸರಿಸಿ ನಡೆಯೋಣ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ